ನಿ-330 - (109)

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ.ತೇಜಸ್ವಿನಿ ಗೌಡ ಇವರು ನಿಯಮ 330ರಡಿ ಕೇಳಿರುವ ಪ್ರಶ್ನೆಗೆ ಉತ್ತರ:

ಪ್ರಶ್ನೆ:

ಕನ್ನಡ ನಾಡಿನ ಸಹ್ಯಾದ್ರಿ, ಸಾಹಿತ್ಯ ಮತ್ತು ಸಾಂಸ್ಕೃತಿಕ ವೈಭವದ ಪ್ರತೀಕವಾಗಿರುವ ಸಹ್ಯಾದ್ರಿಯ ಹೆಬ್ಬಾಗಿಲು ಎನಿಸಿರುವ ಶಿವಮೊಗ್ಗ ಜಿಲ್ಲೆಯ "ತೀರ್ಥಹಳ್ಳಿ ಪಟ್ಟಣ", ಕೊಡಗು ಜಿಲ್ಲೆಯ "ಮಡಿಕೇರಿ ಪಟ್ಟಣ" ಹಾಗೂ ಹಾಸನ ಜಿಲ್ಲೆಯ ಸಕಲೇಶಪುರ ಪಟ್ಟಣ ಮತ್ತು ಮಲೆನಾಡಿನ ವ್ಯಾಪ್ತಿಯಲ್ಲಿ ಬರುವ ಆಯ ಕಟ್ಟಿನ ಜನವಸತಿ ತಾಣಗಳನ್ನು ಮಲೆನಾಡ ಸಂಸ್ಕೃತಿ ಅಳವಡಿಕೆಯ ಮಾದರಿ ಜನವಸತಿ ತಾಣಗಳಾಗಿ ಅಭಿವೃದ್ಧಿ ಪಡಿಸುವ ಅವಶ್ಯಕತೆ ಇದೆ. ಮಲೆನಾಡಿನ ಜನ ಜೀವನ, ಆತಿಥ್ಯ, ಪರಂಪರೆ, ಊಟ ಉಪಚಾರ, ಉಡುಗೆ ತೊಡುಗೆ, ಭಾಷೆ, ಸಾಹಿತ್ಯ, ನಡವಳಿಕೆ, ಮೃದು ಸ್ವಭಾವ, ಮಹಿಳಾ ಸಂವೇದನೆ, ನೈಸರ್ಗಿಕ ಮರಮುಟ್ಟುಗಳಿಂದ ರಚಿತವಾದ ಹೆಂಚಿನ ಮನೆಗಳು, ಕೆತ್ತನೆಯ ಕಂಬಗಳಿಂದ ನಿರ್ಮಾಣವಾದ ವಾಸ್ತು ವೈಭವದ ಮನೆಗಳು, ಮಠಗಳು, ದೇವಾಲಯಗಳು, ಅದ್ವಿತೀಯ ಕೆತ್ತನೆಗಳಿಂದ ಕೂಡಿದ ಅಪಾರವಾದ ಪುಟ್ಟ ಪುಟ್ಟ ದೇವಾಲಯಗಳು, ನಾಡ ಪರಂಪರೆ ಸಾರುವ ಉತ್ಸವವಾದ ಸಾಂಸ್ಕೃತಿಕ ಉತ್ಸವಗಳು, ಆಚರಣೆಗಳು, ಹಿಂದೂ ಪಾಶ್ಚಾತ್ಯ ಆಧುನೀಕರಣದ ಅಂಧ ಅನುಕರಣೆಯಿಂದ ವಿನಾಶದ ಅಳಿವಿನ ಭೀತಿಯನ್ನು ಎದುರಿಸುತ್ತಿವೆ. ಹೀಗಾಗಿ ನಾಡು, ನುಡಿ ಇತಿಹಾಸ, ಜನಜೀವನ ಪರಂಪರೆ, ರಕ್ಷಣೆ ಬಗ್ಗೆ ಯುವ ಜನಾಂಗವನ್ನು ಜಾಗೃತಗೊಳಿಸುವ ತುರ್ತು ಸಂದರ್ಭದ ಅಗತ್ಯತೆ ಬಗ್ಗೆ ಪ್ರಸ್ತಾಪಿಸಲು ಸದನದ ಅನುಮತಿ ಕೋರುತ್ತೇನೆ.

ಉತ್ತರ:

ನಾಡಿನ ಹಲವು ಜಿಲ್ಲೆಗಳಲ್ಲಿ ಉತ್ಸವಗಳನ್ನು ವಿವಿಧ ಹೆಸರಿನಲ್ಲಿ ಆಚರಿಸಲಾಗುತ್ತದೆ. ಉದಾ: ಮೈಸೂರಿನಲ್ಲಿ ನಾಡ ಹಬ್ಬ ದಸರಾ ಉತ್ಸವ, ಬೆಳಗಾವಿ ಜಿಲ್ಲೆಯಲ್ಲಿ ಕಿತ್ತೂರು ಉತ್ಸವ, ಬಳ್ಳಾರಿ/ ವಿಜಯನಗರದಲ್ಲಿ ಹಂಪಿ ಉತ್ಸವಗಳನ್ನು ಆಯಾ ಜಿಲ್ಲಾಡಳಿತಗಳಿಂದ ಏರ್ಪಡಿಸಲಾಗುತ್ತಿದ್ದು, ಈ ಉತ್ಸವಗಳಲ್ಲಿ ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಬಿಂಬಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಕನ್ನಡ ಸಾಹಿತ್ಯ ಪರಿಷತ್ತು, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ, ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಏರ್ಪಡಿಸುತ್ತದೆ. ಈ ಸಮ್ಮೇಳನಗಳಲ್ಲಿ ನಾಡಿನ ಕಲೆ, ಸಂಸ್ಕೃತಿ, ಸಾಹಿತ್ಯವನ್ನು ಬಿಂಬಿಸುವಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು, ಕವಿಗೋಷ್ಠಿ, ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ವಿವಿಧ ಕಲೆ, ಸಂಸ್ಕೃತಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಮಾಡಲಾಗುತ್ತದೆ. ಹಾಗೂ ಇಲಾಖೆಯ ವ್ಯಾಪ್ತಿಗೆ ಬರುವ ಕರ್ನಾಟಕ ಸಾಹಿತ್ಯ, ಜಾನಪದ, ಲಲಿತಕಲೆ, ಶಿಲ್ಪಕಲೆ, ನಾಟಕ, ಸಂಗೀತ ನೃತ್ಯ, ಯಕ್ಷಗಾನ, ಬಯಲಾಟ, ಕೊಂಕಣಿ ಸಾಹಿತ್ಯ, ತುಳು ಸಾಹಿತ್ಯ, ಕೊಡವ ಸಾಹಿತ್ಯ, ಬ್ಯಾರಿ ಸಾಹಿತ್ಯ, ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಗಳಿಂದ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮೂಲಕ ಪುಸ್ತಕಗಳ ಪ್ರಕಟಣೆ, ವಿಚಾರ ಸಂಕಿರಣ ಹಾಗೂ ಕಲೆಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಏರ್ಪಡಿಸುವ ಮುಖಾಂತರ ಈ ನಾಡಿನ ಸಂಸ್ಕೃತಿ, ನಾಡು, ನುಡಿ ಇತಿಹಾಸ ಪರಿಚಯಿಸುವ ಕಾರ್ಯಕ್ರಮಗಳನ್ನು ಮಾಡಲಾಗುತ್ತದೆ.

(ವಿ ಸುನಿಲ್ ಕುಮಾರ್)

ಇಂಧನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ